**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 485/2024**

| | | | |
|---|---|---|---|
| ಹೆಸರು | | ಶ್ರೀ ಕೃಷ್ಣ ಶೆಟ್ಟಿ | ಚಾಸಾಃ 04 |
| ತಂದೆ ಹೆಸರು | | ಶ್ರೀ ಗೀರಿಶೆಟ್ಟಿ | ಪ್ರಾಸಾಃ 03 |
| ವಯಸ್ಸು | | 46 ವರ್ಷ | ಸಾಕ್ಷಿಯನ್ನು ದಿನಾಂಕಃ 23.04.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವ್ಯವಸಾಯ | |
| ವಾಸ | | ಬೇಗೂರು ಗ್ರಾಮ | |

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-</u>**

ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನಾನು ಯಾವುದೆ ಅಪಘಾತವನ್ನು ನೋಡಿಲ್ಲ. ಮೃತ ರಾಜು ನನಗೆ ಗೊತ್ತು. ಅವರು ಅಪಘಾತದಲ್ಲಿ ಮರಣ ಹೊಂದಿದ್ದಾರೆ. ಸಾಕ್ಷಿಯು ಸ್ಥಳ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ3 ಎಂದು, ಸಾಕ್ಷಿಯ ಸಹಿಯನ್ನು ನಿಪಿ3(ಎ) ಎಂದು ಗುರ್ತಿಸಲಾಯಿತು. ಸದರಿ ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಸಾಕ್ಷಿಯು ಎರಡು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತು ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ6 ಎಂದು, ಸಾಕ್ಷಿಯ ಸಹಿಯನ್ನು ನಿಪಿ6(ಎ) ಎಂದು ಗುರ್ತಿಸಲಾಯಿತು. ಸದರಿ ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಸಾಕ್ಷಿಯು ಎರಡು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ7 ಮತ್ತು 8 ಎಂದು ಗುರುತಿಸಲಾಯಿತು. ನಿಪಿ3 ರಿಂದ 8 ರ ವಿಷಯ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪೂರ್ಣ ಪ್ರಮಾಣದಲ್ಲಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 03.11.2024 ರಂದು ಬೇಗೂರಿನ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ದಕ್ಷಿಣದ ಕಡೆಗೆ ಇರುವ ರಸ್ತೆಯಲ್ಲಿ ಶ್ರೀ ಸಿದ್ದಲಿಂಗೇಶ್ವರ ಟ್ರೆಡರ್ಸ್ ಕಡೆಗೆ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ 766 ರಲ್ಲಿ ನಿಪಿ3 ರಂತೆ ಮಹಜರ್ ಜರುಗಿಸಿದರು ಎಂದರೆ ಸರಿಯಲ್ಲ. ಚಾಸಾ–1 ರವರು ಘಟನಾ ಸ್ಥಳವನ್ನು ತೋರಿಸಿದರು ಎಂದರೆ ಸರಿಯಲ್ಲ. ನಿಪಿ3 ನ್ನು ಸಂಜೆ 4.00 ರಿಂದ 4.30 ರವರೆಗೆ ನನ್ನ ಮತ್ತು ಚಾಸಾ–5 ರವರು ಸಮಕ್ಷಮ ಜರುಗಿಸಿದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ4 ಮತ್ತು 5 ರಂತೆ ಫೋಟೋ ತೆಗೆದರು ಎಂದರೆ ಸರಿಯಲ್ಲ. ಅದೇ ದಿನ ಬೇಗೂರು ಪೊಲೀಸ್ ಠಾಣಾ ಆವರಣದಲ್ಲಿ ಚಾಸಾ–1 ರವರು ಅಪಘಾತ ಉಂಟುಮಾಡಿದ ವಾಹನವನ್ನು ಗುರುತಿಸಿದ ಮೇರೆಗೆ ಕೆಎಲ್–56–ಹೆಚ್–3244 ಬಿಳಿ ಬಣ್ಣದ ಸ್ವಿಫ್ಟ್ ಕಾರನ್ನು ನಿಪಿ6 ರಂತೆ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಮಹಜರ್ ನ್ನು ಮದ್ಯಾಹ್ನ 12.00 ರಿಂದ 12.30 ರವರೆಗೆ ನನ್ನ ಮತ್ತು ಚಾಸಾ–5 ರವರು ಸಮಕ್ಷಮ ಜರುಗಿಸಿದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ7 ಮತ್ತು 8 ರಂತೆ ಫೋಟೋಗಳನ್ನು ತೆಗೆದರು ಎಂದರೆ ಸರಿಯಲ್ಲ. ನಿಪಿ3 ರಿಂದ 8 ರ ವಿಷಯ ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಇರುವುದಿಲ್ಲ:**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**

**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**

**ಗುಂಡ್ಲುಪೇಟೆ**